ಹಣದಿಂದ ಬೆಲೆ ಕಟ್ಟಲು ಮನಸು ಒಪ್ಪಲಿಲ್ಲ. ಬೇಡವೇಬೇಡವೆಂದಳು. ಹಂತಕರಿಗೆ ಕಡ್ಡಾಯವಾಗಿ ಶಿಕ್ಷೆಯಾಗಬೇಕು ಎಂದಳು.

ಚಂದ್ರು ಒಪ್ಪಲಿಲ್ಲ. ನೀನು ಕ್ಷಮಾದಾನದ ಪತ್ರ ಬರೆದುಕೊಡದಿದ್ದರೆ ತಾನೇ ಬರೆದುಕೊಡುತ್ತೇನೆಂದ. ಚಂದ್ರು ಹೇಳಿದ್ದನ್ನು ಮಾಡುತ್ತಾನೆಂಬುದು ಗೊತ್ತು. ಅದಕ್ಕೇ ಜಡ್ಜ್ ಎದುರು ಕಸಾಸ್ ಹೇಳಲು ಚಂದ್ರುವನ್ನು ನಂಬಿಸಿ ಇಲ್ಲಿಗೆ ಬಂದಳು.

ಸ್ವಲ್ಪಹೊತ್ತು ಮಾತನಾಡಿ ಸಂಜೆ ಭೇಟಿಯಾಗುತ್ತೇವೆಂದು ಎಲ್ಲರೂ ಹೊರಟರು. ಕೋಣೆಯಲ್ಲಿ ಚಂದ್ರು, ರವಿ, ಸಾವಿತ್ರಿ ಮೂವರೇ ಉಳಿದರು.

''ಚಂದ್ರು... ದೊಡ್ಡಮ್ಮನಿಗೆ ಹೇಳಿದ್ದೀಯಾ... ಜಡ್ಜ್ ಎರಡೇ ಎರಡು ಮಾತು ಕೇಳುತ್ತಾರಂತೆ. ಒಂದು ಕಸಾಸ್... ಇನ್ನೊಂದು ತಾನಾಜಿಲ್ ಎಂದು. ಕಸಾಸ್ ಅಂದಳೆಂದುಕೋ... ಇಷ್ಟು ದಿನ ನಾವು ಪಟ್ಟ ಕಷ್ಟ ವ್ಯರ್ಥವಾಗುತ್ತದೆ. ತಾನಾಜಿಲ್ ಎನ್ನಬೇಕು. ಅಂದರೆ ನಾನು ಕ್ಷಮಿಸುತ್ತಿದ್ದೇನೆ ಎಂಬಂತೆ...'' ರವಿ ಹೇಳಿದ.

"ಕಸಾಸ್... ಕಸಾಸ್..." ಮನಸಿನಲ್ಲಿ ಗಟ್ಟಿಯಾಗಿ ಹೇಳಿಕೊಂಡಳು ಸಾವಿತ್ರಿ.

"ಹೇಳಿದ್ದೇನೆ..." ಅಂದ ಚಂದ್ರು.

ಇಬ್ಬರೂ ಅಡುಗೆ ಕೆಲಸಕ್ಕಿಳಿದರು. ಸಾವಿತ್ರಿ ಅತ್ತಿತ್ತ ತಿರುಗಿ ಬಾಗಿಲು ತೆರೆದು ಹೊರಗೆ ಬಂದಳು. ಒಮ್ಮೆಗೇ ಕಣ್ಣು ತಿರುಗಿದಂತಾಯಿತು. ಇನ್ನೂ ಒಂಬತ್ತು ಗಂಟೆ ದಾಟಿಲ್ಲ. ಬಿಸಿಲು ಕೆಂಡದಂತೆ ಸುಡುತ್ತಿದೆ. ರಾತ್ರಿಯೆಲ್ಲ ತಣ್ಣಗಾಗಿದ್ದ ಮರಳಿನಿಂದ ಬಿಸಿಯ ಹಬೆಯೇಳುತ್ತಿದೆ. ಕಣ್ಣು ಉಜ್ಜಿಕೊಂಡು ಕೈ ಅಡ್ಡವಿಟ್ಟುಕೊಂಡು ಬೆರಳ ಸಂಧಿಯಿಂದ ಸುತ್ತಲೂ ನೋಡಿದಳು.

ಅನಂತವಾದ ಮರಳುಗಾಡು. ಅಲ್ಲಲ್ಲಿ ಲೇಬರ್ ಕ್ಯಾಂಪ್‌ಗಳು. ಎಲ್ಲರೂ ಕೆಲಸಕ್ಕೆ ಹೋಗುವ ಗಡಿಬಿಡಿಯಲ್ಲಿದ್ದಾರೆ. ಡಿಸಿಎಂನಂತಹ ವಾಹನಗಳು ಲೇಬರ್‌ಗಳನ್ನು ಕರೆದೊಯ್ಯಲು ಕ್ಯಾಂಪುಗಳ ಸುತ್ತ ಓಡಾಡುತ್ತಿವೆ. ಬಿಸಿಲಿಗೆ ಮರಳುಗಾಡು ಕನ್ನಡಿಯಂತೆ ಫಳಫಳನೆ ಹೊಳೆಯುತ್ತಿದೆ.

ಸ್ವಲ್ಪಹೊತ್ತಿಗೆ ಕಣ್ಣು ತೆರೆದ ಸಾವಿತ್ರಿಗೆ ಅಲ್ಲಿ ನಿಂತುಕೊಳ್ಳಲಾಗಲಿಲ್ಲ. ಭೂಮಿಯ ಮೇಲಲ್ಲದೆ ಯಾವುದೋ ವಿಚಿತ್ರ ಲೋಕದಲ್ಲಿರುವಂತೆ, ಸುತ್ತಲೂ ಕೆಂಡದ ಗುಂಡಿ ಉರಿಯುತ್ತಿರುವಂತೆ ಅನಿಸಿತು. ಕಾಲು ಸುಡುತ್ತಿದೆ. ಒಂದೇ ಕ್ಷಣಕ್ಕೆ ಬೆವರಿನಿಂದ ತೊಯ್ದಳು.

ಭಯಪಟ್ಟುಕೊಂಡೇ ಒಳಬಂದಳು. ಕೋಣೆಯಲ್ಲಿ ಏರ್ ಕಂಡೀಷನ್ ಗಾಳಿ ದೇಹವನ್ನು ತಂಪಾಗಿಸಿದರೂ ಮನಸ್ಸು ಕೆರಳುತ್ತಿದೆ. ಈಗಲಾದರೂ ಅಳೋಣವೆಂದುಕೊಂಡಳು. ಆದರೆ ದುಃಖ ಉಮ್ಮಳಿಸಲಿಲ್ಲ.

"ಈ ಬಿಸಿಲಿನಲ್ಲಿ ಹೇಗೆ ಕೆಲಸ ಮಾಡುತ್ತೀರೋ" ನೋವಿನಿಂದ ಕೇಳಿದಳು ಸಾವಿತ್ರಿ.

ಅಡುಗೆ ಮಾಡುತ್ತಿದ್ದ ಚಂದ್ರು ನಕ್ಕು, ''ಈಗೇನು ಮಹಾ ನೋಡಿದ್ದು ದೊಡ್ಡಮ್ಮಾ... ಜೂನ್ ಜುಲೈನಲ್ಲಿ ಬೆಳಗಿನಹೊತ್ತು ನೋಡಬೇಕು... ಸುಟ್ಟುಹೋಗುವುದೇ. ದುಬಾಯಿನಲ್ಲಿದ್ದಾನೆ ಎಂದರೆ ಏನೋ ಅಂದುಕೊಳ್ಳುತ್ತಾರೆ. ನಮ್ಮ ಪಾಡು ಯಾರಿಗೆ ಅರ್ಥವಾಗುತ್ತೆ'' ಎಂದ.

''ಹೊಟ್ಟೆಗಾಗಿ ದೊಡ್ಡಮ್ಮ... ಇರುವ ಊರಿನಲ್ಲಿ ಕೆಲಸವಿಲ್ಲದೆ ಹೋಯಿತು. ಕೆಲಸವಿರುವ ಜಾಗದಲ್ಲಿ ಸುಖವಿಲ್ಲ. ಏನೋ ಸ್ವಲ್ಪ ದಿನ ಎಳೆದಾಡಬೇಕು...'' ನಗಲು ಪ್ರಯತ್ನಿಸಿದ ರವಿ, ನಗು ಬರಲಿಲ್ಲ. ಆಯಾಸದಿಂದ ಬಂದು ಪಕ್ಕಕ್ಕೆ ವಾಲಿದಳು ಸಾವಿತ್ರಿ. ರವಿ, ಚಂದ್ರು ಅಡುಗೆ ಮಾಡುತ್ತ ಯಾರ್ಯಾರನ್ನು ಭೇಟಿ ಮಾಡಬೇಕು, ಏನು ಮಾಡಬೇಕು ಎಂದು ಮಾತನಾಡಿಕೊಂಡರು.

''ನಾವೀಗ ಎಂಬಸಿಗೆ ಹೋಗೋದಾ...'' ರವಿ ಕೇಳಿದ.

''ಇಲ್ಲ ನೇರ ಕೋರ್ಟಿಗೇ. ನಾವು ಪಾರ್ಡನ್ ಲೆಟರ್ ಕೊಡುತ್ತಲೇ ಅವರು ಕೋರ್ಟಿನಲ್ಲಿ ಹಣ